**SDM COLLEGE (Autonomous), UJIRE-574240, D. K**

Reaccredited at A Grade CGPA 3.61 by NAAC

**FINAL REPORT OF MAJOR RESEARCH PROJECT**

*Submitted to*

**UNIVERSITY GRANTS COMMISSION**

BAHADUR SHAH ZAFAR MARG, NEW DELHI – 110 002

**Title of the Project**

# ORAL AND WRITTEN TRADITIONS OF JAINA SONGS-A CULTURAL STUDY

***Principal Investigator***

**Dr. B.P.Sampath kumar, M.A.,Ph.D.**

Associate Professor & Head, Department of Kannada

S.D.M COLLEGE (Autonomous),

UJIRE- 574240, D. K

***Co-Investigator***

**Dr. Rajashekar, M.A.,Ph.D.**

Assistant Professor, Department of Kannada

S.D.M COLLEGE (Autonomous),

UJIRE- 574240, D. K

# I

# Express

# my heartfelt gratitude

# to the

# UNIVERSITY GRANTS COMMISSION

# for considering my application

# for the project

# and financially assisting me throughout


***Principal Investigator***

**Dr. B.P.Sampath kumar, M.A.,Ph.D.**

Associate Professor & Head, Department of Kannada

S.D.M COLLEGE (Autonomous),

UJIRE- 574240, D. K, Karnataka

# ಮೊದಲ ಮಾತು

'ಕಂಠಸ್ಥ ಹಾಗೂ ಗ್ರಂಥಸ್ಥ ಪರಂಪರೆಯ ಜೈನ ಹಾಡುಗಳು–ಸಾಂಸ್ಕೃತಿಕ ಅಧ್ಯಯನ' ಎಂಬ ಶಿರೋನಾಮೆಯಲ್ಲಿ ಯು.ಜಿ.ಸಿ.ಧನ ಸಹಾಯ(UGC Sponsored) ದಿಂದ ನಡೆಸಲಾದ ಅಧ್ಯಯನವಿದು. ಜೈನಕವಿಗಳು ಕೇವಲ ಧಾರ್ಮಿಕ ಗ್ರಂಥಗಳಲ್ಲದೇ ಲೌಕಿಕ ಗ್ರಂಥಗಳ ರಚನಯನ್ನೂ ಮಾಡಿದ್ದಾರೆ. ಚಂಪೂ ಪ್ರಕಾರ ಜೈನ ಕವಿಗಳ ಪ್ರಮುಖ ಕಾವ್ಯ ಮಾಧ್ಯಮವಾದರೂ ಷಟ್ಪದಿ, ತ್ರಿಪದಿ, ಸಾಂಗತ್ಯಗಳಂಥ ದೇಶಿ ಛಂದಸ್ಸಿನಲ್ಲಿ ಕೂಡ ಕೃತಿ ರಚನೆ ಮಾಡಿದ್ದಾರೆ. ಇದಕ್ಕೆ ಪೂರಕವೆಂಬಂತೆ ಕೆಲ ರತ್ನಾಕರನಂಥ ಜೈನಕವಿಗಳು, ರಾಗ–ತಾಳಬದ್ಧವಾದ ಹಾಡುಗಳನ್ನು ಬರೆದಿದ್ದಾರೆ. ಇವರ ಜೊತೆಯಲ್ಲಿ ಜನಪದ ಪರಂಪರೆಯಲ್ಲಿ ತೀರ್ಥಂಕರರ ಕುರಿತು, ಯಕ್ಷಯಕ್ಷಿಯರ ಕುರಿತು, ಜೈನ ಹಬ್ಬಗಳ ಕುರಿತು, ಮದುವೆ ಮೊದಲಾದ ಆಚರಣೆ, ಸಂಪ್ರದಾಯಗಳ ಕುರಿತು ಹೇರಳವಾಗಿ ಹಾಡುಗಳು ರಚನೆಯಾಗಿವೆ. ಮಹಾಕಾವ್ಯಗಳ ಕಥಾವಸ್ತುವನ್ನೇ ತಮ್ಮೊಡಲಲ್ಲಿರಿಸಿಕೊಂಡು ಕುಳಿತಿರುವ ಇದಕ್ಕಿಂತ ಹೆಚ್ಚಾಗಿ ಸ್ಥಳೀಯ ಸ್ಥಳಪುರಾಣ ಮಹಾತ್ಮೆಗಳನ್ನು ಉಸುರುವ ಈ ಹಾಡುಗಳ ಶೋಧ–ಸಂಗ್ರಹ–ಸಂಪಾದನೆ ಹಾಗೂ ವಿಶ್ಲೇಷಣೆಗಳು ವೀರಶೈವ ಹಾಗೂ ಹರಿದಾಸರ ಸ್ವರವಚನ–ಕೀರ್ತನೆಗಳಂತೆ ವ್ಯಾಪಕವಾಗಿ ನಡೆದಿರುವುದಿಲ್ಲ. ಹೀಗಾಗಿ ನಾಡಿನ ಪ್ರಮುಖ ಜೈನಮಠಗಳಲ್ಲಿ, ಬೀಡುಗಳಲ್ಲಿ, ಗುತ್ತುಗಳಲ್ಲಿ, ಹಿರಿಯರ ಮನೆಗಳಲ್ಲಿ, ಪ್ರತಿಷ್ಠಾನಗಳಲ್ಲಿ, ವಿಶ್ವವಿದ್ಯಾಲಯದ ಹಸ್ತಪ್ರತಿ ಭಂಡಾರಗಳಲ್ಲಿ ಸಂಗ್ರಹವಾಗಿರುವ ಹಾಡುಗಳನ್ನು ಸಂಗ್ರಹಿಸಿ, ಸಂಪಾದಿಸಿ, ಅವುಗಳ ಸಾಂಸ್ಕೃತಿಕ ಮಹತ್ವವನ್ನು ತಿಳಿಯಪಡಿಸುವ ಉದ್ದೇಶದಿಂದ ಈ ಅಧ್ಯಯನ ನಡೆಸಲಾಯಿತು.

ಆರಂಭದ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ ಹಾಗೂ ಜೈನ ಹಾಡುಗಳ ಲಕ್ಷಣಗಳನ್ನು ಸ್ಪಷ್ಟಪಡಿಸಲಾಗಿದೆ. ಎರಡನೆಯ ಅಧ್ಯಾಯದಲ್ಲಿ ಜೈನಧರ್ಮದ ಇತಿಹಾಸ, ಕರ್ನಾಟಕಕ್ಕೆ ಜೈನಧರ್ಮದ ಆಗಮನ, ಆಶ್ರಯ ನೀಡಿದ ರಾಜಮನೆತನಗಳ ವಿವರಗಳನ್ನು ಅಧ್ಯಯನಕ್ಕೆ ಪೂರಕವಾಗಿ ವಿಶ್ಲೇಷಿಸಲಾಗಿದೆ. ಅಧ್ಯಾಯ ಮೂರರಲ್ಲಿ ಜೈನ ಹಾಡುಗಳ ವಸ್ತು ವಿಷಯದಲ್ಲಿ ತೀರ್ಥಂಕರರ ಹಾಡುಗಳನ್ನು ವಿಶ್ಲೇಷಿಸಲಾಗಿದೆ. ತೀರ್ಥಂಕರರ ಮಹಿಮೆ ಹಾಗೂ ಗುಣಸ್ವಭಾವಗಳ ಚಿತ್ರಣ ಇಲ್ಲಿನ ಹಾಡುಗಳಲ್ಲಿರುವುದನ್ನು ಗುರುತಿಸಲಾಗಿದೆ. ತೀರ್ಥಂಕರರ ಹಾಡುಗಳಂತೆ ಅತಿ ಹೆಚ್ಚು ಸಂಖ್ಯೆಯಲ್ಲಿ ನಮಗೆ ಲಭ್ಯವಾಗುವ ಹಾಡುಗಳೆಂದರೆ ಯಕ್ಷಯಕ್ಷಿಯರ ಕುರಿತ ಹಾಡುಗಳೂ. ಸಾಮಾನ್ಯವಾಗಿ ಸ್ತ್ರೀಯರೇ ಹೆಚ್ಚಾಗಿ ಹಾಡುವಂಥ ಈ ಬಗೆಯ ಹಾಡುಗಳಲ್ಲಿ ವೈವಿಧ್ಯತೆಯಿದೆ, ವಿಶಿಷ್ಟವಾದ ಭಾವಜಗತ್ತು ಇದೆ. ಸಾಂಸಾರಿಕ ಕಷ್ಟ–ನಷ್ಟಗಳಿಂದ ಪಾರು ಮಾಡುವಂತೆ ಯಕ್ಷಯಕ್ಷಿಯರಲ್ಲಿ ಬೇಡಿಕೊಳ್ಳುವ ಶರಣಾಗತಭಾವವಿದೆ. ನಾಲ್ಕನೆಯ ಅಧ್ಯಾಯದಲ್ಲಿ ಈ ಕುರಿತ ವಿವರಗಳನ್ನು ಒದಗಿಸಲಾಗಿದೆ.

ಇತರ ಸಂಪ್ರದಾಯಗಳಂತೆ ಜೈನರಲ್ಲೂ ವಿವಿಧ ಹಬ್ಬಗಳ ಆಚರಣೆಗಳಿವೆ. ಆ ಹಬ್ದಗಳ ವೈಶಿಷ್ಟ್ಯ ಹಾಗೂ ಅವುಗಳಿಗೆ ಸಂಬಂಧಿಸಿದಂತೆ ರಚಿತವಾದ ಹಾಡುಗಳ ಸ್ವರೂಪವನ್ನು ಅಧ್ಯಾಯ ಐದರಲ್ಲಿ ವಿಶ್ಲೇಷಿಸಲಾಗಿದೆ. ಅಧ್ಯಾಯ ಆರರಲ್ಲಿ ಜೈನ ಸಂಪ್ರದಾಯದಲ್ಲಿ ಬೆಳೆದು ಬಂದಿರುವ 'ಮದುವೆಯ ಹಾಡುಗಳ' ಕುರಿತು ಅಧ್ಯಯನ ನಡೆಸಲಾಗಿದೆ. ಮದುವೆ ಒಂದು ಯಾಂತ್ರಿಕವಾದ ಕ್ರಿಯೆಯಾಗದೆ ಅದು ಜನಪದರ ಸಂಭ್ರಮ, ಸಡಗರಗಳ ಪ್ರತೀಕವಾಗಿರುವುದು, ಕುಟುಂಬಳ ನಡುವೆ ಸಾಮರಸ್ಯ ಬೆಸೆಯುವ ಸೇತುವೆಯಾಗಿರುವುದು, ಸಂಪ್ರದಾಯ, ಪದ್ಧತಿಗಳ ಜೀವಂತ ಅಭಿವ್ಯಕ್ತಿಯಾಗಿರುವುದು ಹಾಡುಗಳ ಮೂಲಕ ವೇದ್ಯವಾಗುತ್ತದೆ. ಮದುವೆ ಕೇವಲ ಒಂದು ದಿನ ನಡೆದು ಹೋಗುವ ಒತ್ತಡದ ಕಾರ್ಯವಲ್ಲ. ಅದು ವಿಶಿಷ್ಟ ಆಚರಣೆ, ಉತ್ಸವ ಎಂಬಂತೆ ಜನಪದರು ಕಂಡಿದ್ದರು ಎಂಬುದು ವೈವಿಧ್ಯಮಯವಾದ 'ಮದುವೆ ಹಾಡುಗಳ'ಮೂಲಕ ಸ್ಪಷ್ಟವಾಗಿರುವುದನ್ನು ಅಧ್ಯಯನಲ್ಲಿ ಕಂಡುಕೊಳ್ಳಲಾಗಿದೆ. ಅಧ್ಯಾಯ ಏಳರಲ್ಲಿ ಗ್ರಂಥಸ್ಥ ಪರಂಪರೆಯಲ್ಲಿ ಜೈನ ಹಾಡುಗಳನ್ನು ರಚಿಸಿದ 'ರತ್ನಾಕರವರ್ಣಿ ರಚಿಸಿದ ಹಾಡುಗಳ ಮಹತ್ವವನ್ನು, ಸ್ವರೂಪವನ್ನು

ಸ್ಥೂಲವಾಗಿ ವಿಶ್ಲೇಷಿಸಲಾಗಿದೆ. ಅಧ್ಯಯನದ ಕೊನೆಯಲ್ಲಿ ಕೆಲವು ಭಾವಚಿತ್ರಗಳನ್ನು, ಅನುಬಂಧದಲ್ಲಿ ಸಂಗ್ರಹಿಸಲಾದ ವೈವಿಧ್ಯಮಯವಾದ ಹಾಡುಗಳ ಮಾದರಿಗಳನ್ನು ಕೊಡಲಾಗಿದೆ.

ಯೋಜನೆಯ ಅಡಿಯಲ್ಲಿ ಅಧ್ಯಯನ ಕೈಗೊಂಡು ನಡೆಸಲಾದ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಜೈನ ಧರ್ಮ, ತತ್ವ, ಸಿದ್ಧಾಂತ, ತೀರ್ಥಂಕರರು, ಯಕ್ಷಯಕ್ಷಿಯರು, ಮದುವೆ, ಹಬ್ಬಗಳೇ ಮೊದಲಾದ ವಿವಿಧ ಸಂಪ್ರದಾಯ, ಆಚರಣೆ, ಪದ್ಧತಿಗಳಿಗೆ ಸಂಬಂಧಿಸಿದಂತೆ ವ್ಯಾಪಕ ಪ್ರಮಾಣದಲ್ಲಿ ಹಾಡುಗಳು ರಚಿತವಾಗಿರುವುದನ್ನು ಗುರುತಿಸಿ ಸಾಕಷ್ಟು ಪ್ರಮಾಣದಲ್ಲಿ ಅವುಗಳ ದಾಖಲಾತಿಯನ್ನು ಮಾಡಲಾಗಿದೆ ಹಾಗೂ ಸಂಗ್ರಹಿಸಲಾದ ಹಾಡುಗಳನ್ನು ವಿಷಯಾನುಗುಣವಾಗಿ ವಿಂಗಡಿಸಿಕೊಂಡು ಅವುಗಳ ಸಾಂಸ್ಕೃತಿಕ ಮಹತ್ವವನ್ನು ವಿಷದಪಡಿಸಲಾಗಿದೆ. ಅಧ್ಯಯನ ಸಮಾಜಕ್ಕೆ ಉಪಯೋಗವಾಗಲೆಂದು ಸಂಶೋಧನ ಲೇಖನವನ್ನು ಪ್ರಕಟಿಸಲಾಗಿದೆ. ವಿಚಾರ ಸಂಕಿರಣದಲ್ಲಿ, ಜೈನ್ ಮಿಲನ್ ಸಭೆಗಳಲ್ಲಿ ಉಪನ್ಯಾಸ ನೀಡಿ ಜಾಗೃತಿ ಮೂಡಿಸಲಾಗಿದೆ.

ಈ ಯೋಜನೆಯನ್ನು ಪೂರ್ಣಗೊಳಿಸಲು ಉದಾರವಾಗಿ ಧನಸಹಾಯ ನೀಡಿದ ವಿಶ್ವವಿದ್ಯಾಲಯ ಧನಸಹಾಯ ಆಯೋಗಕ್ಕೆ (UGC) ನಾನು ಗೌರವಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಯೋಜನೆಯ ಪೋಷಕರಾಗಿ ನಿಂತು ಆಶೀರ್ವದಿಸಿದ ಸಂಸ್ಥೆಯ ಅಧ್ಯಕ್ಷರಾದ ಪದ್ಮವಿಭೂಷಣ ಡಾ. ಡಿ.ವೀರೇಂದ್ರ ಹೆಗ್ಗಡೆಯವರಿಗೆ, ಪ್ರೇರಣೆಯಾಗಿ ನಿಂತ ಶ್ರೀಮತಿ ಹೇಮಾವತಿ ವೀ.ಹೆಗ್ಗಡೆಯವರಿಗೆ, ಪ್ರೋತ್ಸಾಹ ನೀಡಿ ಮಾರ್ಗದರ್ಶನ ಮಾಡುತ್ತ ಎಲ್ಲ ಬಗೆಯ ಸಹಕಾರ ನೀಡಿದ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿಗಳಾಗಿರುವ ಡಾ.ಬಿ.ಯಶೋವರ್ಮ ಅವರಿಗೆ, ಸಹಕಾರ ನೀಡಿರುವ ಪ್ರಾಂಶುಪಾಲರಾದ ಪ್ರೊ.ಟಿ.ಎನ್.ಕೇಶವ ಅವರಿಗೆ, ಯೋಜನೆಯ ಉದ್ದಕ್ಕೂ ನೆರವಾಗಿ ನಿಂತ ಪತ್ನಿ ವೀರಶ್ರೀ ಮಕ್ಕಳು ಅಮೂಲ್ಯ ಹಾಗೂ ಅನನ್ಯ ಮತ್ತು ಯೋಜನೆಯ ಕೋ–ಇನ್‌ವೆಸ್ಟಿಗೇಟರ್ ಗೆಳೆಯ ಡಾ. ರಾಜಶೇಖರ ಅವರಿಗೆ, ಸಂಶೋದನಾ ಸಹಾಯಕರಾಗಿದ್ದ ಶ್ರೀ ಸಿದ್ಧರಾಜು ಅವರಿಗೆ ನಾನು ಆಭಾರಿಯಾಗಿದ್ದೇನೆ.

ಈ ಅಧ್ಯಯನ ಒಂದು ಪ್ರಯತ್ನ ಮಾತ್ರ. ಈ ಕ್ಷೇತ್ರದಲ್ಲಿ ಇನ್ನಷ್ಟು ಅಧ್ಯಯನಗಳ ಅವಶ್ಯಕತೆಯಿದೆ. ಕರ್ನಾಟಕದ ವೈವಿಧ್ಯಮಯ ಸಂಸ್ಕೃತಿಯನ್ನು ರೂಪಿಸುವಲ್ಲಿ ಪ್ರಧಾನ ಪಾತ್ರ ವಹಿಸಿರುವ ಜೈನಧರ್ಮದಲ್ಲಿ ಜನಪದ ಪರಂಪರೆಯಲ್ಲಿ ರಚಿತವಾದ ಹಾಡುಗಳು ಹೇರಳವಾಗಿವೆ. ವಿಶೇಷವಾಗಿ ಹೈದರಾಬಾದ್ ಕರ್ನಾಟಕ ಭಾಗದಲ್ಲಿ ರಚಿತವಾಗಿ ಕಂಠಸ್ಥ ಪರಂಪರೆಯಲ್ಲಿ ಉಳಿದುಕೊಂಡು ಬಂದಿರುವ ವೈವಿಧ್ಯಮಯವಾದ ಹಾಡುಗಳನ್ನು ವ್ಯಾಪಕ ಪ್ರಮಾಣದಲ್ಲಿ ಸಂಗ್ರಹಿಸಿ ಅವುಗಳ ಸಾಂಸ್ಕೃತಿಕ ಮಹತ್ವವನ್ನು ವಿಷದಪಡಿಸಬೇಕಾದ ಅವಶ್ಯಕತೆಯಿದೆ. ಮುಂದೆ ಅಧ್ಯಯನ ಕೈಗೊಳ್ಳುವವರು ಈ ಕುರಿತು ಗಮನಹರಿಸಬಹುದು.

ಡಾ.ಬಿ.ಪಿ.ಸಂಪತ್ ಕುಮಾರ

# ಪರಿವಿಡಿ


| ಕ್ರ. ಸಂ. | ವಿಷಯ | ಪುಟ ಸಂಖ್ಯೆ |
|---|---|---|
| 1. | ಅಧ್ಯಾಯ: ಒಂದು – ಪ್ರಸ್ತಾವನೆ | 1-11 |
| 2. | ಅಧ್ಯಾಯ: ಎರಡು– ಕರ್ನಾಟಕದಲ್ಲಿ ಜೈನಧರ್ಮದ ಇತಿಹಾಸ ಮತ್ತು ಬೆಳವಣಿಗೆ | 12-25 |
| 3. | ಅಧ್ಯಾಯ: ಮೂರು– ಕನ್ನಡ ಜೈನಹಾಡುಗಳ ವಸ್ತು ವಿಷಯ | 26-54 |
| 4. | ಅಧ್ಯಾಯ: ನಾಲ್ಕು – ಯಕ್ಷ-ಯಕ್ಷಿಯರ ಹಾಡುಗಳು | 55-66 |
| 5. | ಅಧ್ಯಾಯ: ಐದು – ಜೈನರ ಪರ್ವಗಳನ್ನು ಕುರಿತ ಹಾಡುಗಳು | 67-111 |
| 6. | ಅಧ್ಯಾಯ: ಆರು – ಮದುವೆಯ ಹಾಡುಗಳು | 112-125 |
| 7. | ಅಧ್ಯಾಯ: ಏಳು – ರತ್ನಾಕರನ ಕೀರ್ತನೆಗಳು | 126-138 |
| 8. | ಭಾವಚಿತ್ರಗಳು | 139-142 |
| 9. | ಅನುಬಂಧ | 143-195 |